## ಕರ್ನಾಟಕ ಸರ್ಕಾರ

ಸಂಖ್ಯೆ: ಅಸಾನಿ/86/ಆಡಳಿತ-4/2013-14

20370-406

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 24.09.2016.

### ಅಧಿಕೃತ ಜ್ಞಾಪನ

ವಿಷಯ: ಹೈದ್ರಾಬಾದ್ - ಕರ್ನಾಟಕ ಪ್ರದೇಶಕ್ಕೆ ವಿಶೇಷ ಸ್ಥಾನಮಾನ ಕಲ್ಪಿಸುವ ಭಾರತ ಸಂವಿಧಾನದ ಅನುಚ್ಛೇದ 371(ಜೆ)ಯನ್ನು ಅನುಷ್ಠಾನಗೊಳಿಸುವ ಸಂಬಂಧ ದಿನಾಂಕ: 01.01.2015 ರಲ್ಲಿದ್ದಂತೆ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ರಾಜ್ಯವ್ಯಾಪ್ತಿ ಸ್ಥಳೀಯ ವೃಂದದ (ಶೇ.80ರಷ್ಟು+8ರಷ್ಟು ಮೀಸಲಾತಿ) ಬೆರಳಚ್ಚುಗಾರರ ತಾತ್ಕಾಲಿಕ ಜೇಷ್ಠತಾ ಪಟ್ಟಿ ಹೊರಡಿಸುವ ಬಗ್ಗೆ.

ಉಲ್ಲೇಖ:
1. ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಬೆರಳಚ್ಚುಗಾರರ ಪ್ರಾಂತೀಯ ಸ್ಥಳೀಯ ವೃಂದದ(80%) ಮತ್ತು ರಾಜ್ಯ ಸ್ಥಳೀಯ ವೃಂದದ(8%) ದಿನಾಂಕ: 01.01.2015 ರಲ್ಲಿದ್ದಂತೆ ಹೊರಡಿಸಲಾದ ಅಂತಿಮ ಜೇಷ್ಠತಾ ಪಟ್ಟಿಯ ಅಧಿಕೃತ ಜ್ಞಾಪನ ಸಂಖ್ಯೆ:ಆಸಾನಿ/86/ಆಡಳಿತ-4/2013-14/13368-92, ದಿನಾಂಕ:16.07.2015.
2. ಸರ್ಕಾರದ ಅಧಿಸೂಚನೆ ಸಂಖ್ಯೆ:ಡಿಪಿಎಆರ್/43/ಹೆಚ್‌ಕೆಸಿ /2013, ದಿನಾಂಕ: 29.01.2014.

******

ಕರ್ನಾಟಕ ಸರ್ಕಾರಿ ನೌಕರರ ಜೇಷ್ಠತೆ ನಿಯಮಗಳು 1957ರ ನಿಯಮ 10ರ ಮೇರೆಗೆ ಪ್ರತಿ ವರ್ಷವೂ ಸರ್ಕಾರಿ ಸೇವೆಯ ಪ್ರತಿ ವೃಂದದ ಅಥವಾ ಪ್ರತಿ ವರ್ಗದ ಹುದ್ದೆಗಳಲ್ಲಿನ ಎಲ್ಲಾ ನೌಕರರುಗಳ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಬೇಕಾಗಿರುತ್ತದೆ. ಅದರಂತೆ ಉಲ್ಲೇಖ (1)ರಲ್ಲಿನ ಈ ಕಚೇರಿ ಅಧಿಕೃತ ಜ್ಞಾಪನದಲ್ಲಿ ದಿನಾಂಕ:01.01.2015 ರಲ್ಲಿದ್ದಂತೆ ಬೆರಳಚ್ಚುಗಾರರ ವೃಂದದ ಪ್ರಾಂತೀಯ ಸ್ಥಳೀಯ ವೃಂದ (ಶೇಕಡಾ. 80ರಷ್ಟು), ರಾಜ್ಯ ಸ್ಥಳೀಯ ವೃಂದ (ಶೇಕಡಾ. 8ರಷ್ಟು), ಮತ್ತು ಅವಶಿಷ್ಟ ವೃಂದದ ಅಂತಿಮ ಜೇಷ್ಠತಾ ಪಟ್ಟಿಯನ್ನು ಜ್ಞಾಪನದೊಂದಿಗೆ ಲಗತ್ತಿಸಲಾದ ಅನುಬಂಧ-2ರಲ್ಲಿ ಹೊರಡಿಸಲಾಗಿರುತ್ತದೆ.

ಉಲ್ಲೇಖ(2)ರ ಸರ್ಕಾರದ ಅಧಿಸೂಚನೆಯಲ್ಲಿ ಪ್ರಾಂತೀಯ ಸ್ಥಳೀಯ ವೃಂದ (80%) ಮತ್ತು ರಾಜ್ಯ ಸ್ಥಳೀಯ ವೃಂದವನ್ನು (8%) ವಿಲೀನಗೊಳಿಸುವ ಮೂಲಕ ರಾಜ್ಯವ್ಯಾಪ್ತಿ ಸ್ಥಳೀಯ ವೃಂದವನ್ನು ರಚಿಸಿ, ಉಳಿದ ಮೂಲ ವೃಂದ ಮತ್ತು ಸ್ಥಳೀಯ ವೃಂದವನ್ನು ಒಂದು ಪ್ರತ್ಯೇಕ ಘಟಕವೆಂದು ಪರಿಗಣಿಸಿ, <u>**ಎರಡು ಸಮಾನಾಂತರ ರೋಸ್ಟರ್ ಆವರ್ತಕಗಳನ್ನು**</u> ಉಳಿದ ಮೂಲ ವೃಂದ ಮತ್ತು ಸ್ಥಳೀಯ ವೃಂದಕ್ಕಾಗಿ ಜಾರಿಗೊಳಿಸತಕ್ಕದ್ದು ಎಂದು ಆದೇಶಿಸಿರುವ ಮೇರೆಗೆ ಉಲ್ಲೇಖ(1) ರಲ್ಲಿನ ಈ ಕಛೇರಿ ಅಧಿಕೃತ ಜ್ಞಾಪನದಲ್ಲಿ ದಿನಾಂಕ: 01.01.2015ರಲ್ಲಿದ್ದಂತೆ ಹೊರಡಿಸಲಾಗಿದ್ದ ಬೆರಳಚ್ಚುಗಾರರ ವೃಂದದ ಪ್ರಾಂತೀಯ ಸ್ಥಳೀಯ ವೃಂದ (80%) ಮತ್ತು ರಾಜ್ಯ ಸ್ಥಳೀಯ ವೃಂದ (8%)ವನ್ನು ವಿಲೀನಗೊಳಿಸಿ ರಾಜ್ಯವ್ಯಾಪ್ತಿ ಸ್ಥಳೀಯ ವೃಂದವನ್ನು ರಚಿಸಲು ಉದ್ದೇಶಿಸಲಾಗಿರುತ್ತದೆ. ಅದರಂತೆ, ದಿನಾಂಕ: 01.01.2015ರಲ್ಲಿದ್ದಂತೆ ಬೆರಳಚ್ಚುಗಾರರ ರಾಜ್ಯವ್ಯಾಪ್ತಿ ಸ್ಥಳೀಯ ವೃಂದದ ತಾತ್ಕಾಲಿಕ ಜೇಷ್ಠತಾಪಟ್ಟಿಯನ್ನು ಈ ಜ್ಞಾಪನದೊಂದಿಗೆ ಲಗತ್ತಿಸಲಾದ ಅನುಬಂಧ-2ರಲ್ಲಿ ಹೊರಡಿಸಲಾಗಿದೆ.

ಅನುಬಂಧದಲ್ಲಿ ಲಗತ್ತಿಸಿರುವ ರಾಜ್ಯವ್ಯಾಪ್ತಿ ಸ್ಥಳೀಯ ವೃಂದದ (State wide local cadre) ತಾತ್ಕಾಲಿಕ ಜೇಷ್ಠತಾ ಪಟ್ಟಿಯ ಮೇಲೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಅಂತಹ ಆಕ್ಷೇಪಣೆಗಳಿಗೆ ಸಂಬಂಧಿಸಿದಂತೆ ನಿರ್ದಿಷ್ಟ ಕಾರಣ ಮತ್ತು ಪೂರಕ ದಾಖಲೆಗಳೊಂದಿಗೆ ಈ ಅಧಿಕೃತ ಜ್ಞಾಪನ ಹೊರಡಿಸಿದ ದಿನಾಂಕದಿಂದ 15 ದಿನಗಳ ಒಳಗಾಗಿ ಸಂಬಂಧಿಸಿದ ಮೇಲಧಿಕಾರಿಗಳ ಮುಖಾಂತರ ದೃಢೀಕರಣದೊಂದಿಗೆ ಸಲ್ಲಿಸಿದ್ದಲ್ಲಿ ನಿಮ್ಮ ಮನವಿಯನ್ನು ನಿಯಮಾನುಸಾರ ಪರಿಶೀಲಿಸಲಾಗುವುದೆಂದು ತಿಳಿಸಿದೆ. ತದನಂತರ ಸ್ವೀಕರಿಸಲಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲವೆಂದು ತಿಳಿಸಲಾಗಿದೆ.

ಈ ತಾತ್ಕಾಲಿಕ ಜೇಷ್ಠತಾ ಪಟ್ಟಿಯು ಸರ್ಕಾರದಿಂದ/ನ್ಯಾಯಾಲಯದಿಂದ ಹೊರಡಿಸಬಹುದಾದ ತಿದ್ದುಪಡಿ ಆದೇಶಗಳಿಗೆ ಒಳಪಟ್ಟಿರುತ್ತದೆ.

(ಸಹಿ)
(ಕೆ. ಬಿ. ಸುಬ್ರಮಣ್ಯಂ)
ನಿರ್ದೇಶಕರು.

ಗೆ,
ಸಂಬಂಧಪಟ್ಟ ಎಲ್ಲಾ ನೌಕರರಿಗೆ.

<u>ಪ್ರತಿಯನ್ನು :</u>

1. **ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ** ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು ಇವರ ಮಾಹಿತಿಗಾಗಿ.

2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ವಿಧಾನ ಸೌಧ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
3. ಸರ್ಕಾರದ ಜಂಟಿ ಕಾರ್ಯದರ್ಶಿಗಳು, ಹೈದ್ರಾಬಾದ್-ಕರ್ನಾಟಕ ವಿಶೇಷ ಕೋಶ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ವಿಧಾನ ಸೌಧ, ಬೆಂಗಳೂರು.
4. ಎಲ್ಲಾ ಜಂಟಿ ನಿರ್ದೇಶಕರು, ಕೇಂದ್ರ ಕಛೇರಿ, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು-1.
5. ಎಲ್ಲಾ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ಮಾಹಿತಿಗಾಗಿ ಹಾಗೂ ಈ ಜೇಷ್ಠತಾ ಪಟ್ಟಿಯ ಪ್ರತಿಯನ್ನು ನಿಮ್ಮ ಕಚೇರಿ/ಜಿಲ್ಲೆಯಲ್ಲಿನ, ನಿಯೋಜನಾ ಕಛೇರಿಗಳಲ್ಲಿ ಎನ್-ಕೇಡರ್/ಎಸ್-ಕೇಡರ್ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೆರಳಚ್ಚುಗಾರರುಗಳಿಗೆ ತಲುಪಿಸಲು ವ್ಯವಸ್ಥೆ ಮಾಡುವಂತೆ ಮತ್ತು ತಲುಪಿಸಿದ್ದಕ್ಕೆ ಸ್ವೀಕೃತಿ ಪಡೆದು ಕಳುಹಿಸಲು ಇದನ್ನು ಆದ್ಯತೆ ಮೇಲೆ ಪರಿಗಣಿಸಲು ಸೂಚಿಸಿದೆ.
6. ಕೇಂದ್ರ ಕಚೇರಿಯ ಎಲ್ಲಾ ಅಧೀಕ್ಷಕರಿಗೆ.
7. ನಿರ್ದೇಶಕರ ಆಪ್ತ ಸಹಾಯಕರಿಗೆ.
8. ಶ್ರೀ ರಂಗನಾಥ ಪ್ರಸಾದ್, ಸಹಾಯಕ ಸಾಂಖ್ಯಿಕ ಅಧಿಕಾರಿ, ಎ.ಆರ್.ಸಿ. ವಿಭಾಗ, ಆಸಾಂನಿ, ಬೆಂಗಳೂರು ಇವರು ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ನಿರ್ದೇಶನಾಲಯದ ವೆಬ್-ಸೈಟ್‌ನಲ್ಲಿ ಅಳವಡಿಸಲು ಸೂಚಿಸಲಾಗಿದೆ.
9. ಪತ್ರಾಂಕಿತ ವ್ಯವಸ್ಥಾಪಕರಿಗೆ (2).
10. ಕಚೇರಿ ಪ್ರತಿ.

<u>ಅನುಬಂಧ-2</u>

<u>ರಾಜ್ಯ ವ್ಯಾಪ್ತಿ ಸ್ಥಳೀಯ ವೃಂದ (ರಾಜ್ಯ ಸ್ಥಳೀಯ ವೃಂದ - ಪ್ರಾಂತೀಯ ಸ್ಥಳೀಯ ವೃಂದ)</u>

ದಿನಾಂಕ: **01.01.2015** ರಲ್ಲಿದ್ದಂತೆ ಅನುಚ್ಛೇದ **371**ಜೆ – ಹೈದ್ರಾಬಾದ್ – ಕರ್ನಾಟಕ ಪ್ರದೇಶದ ರಾಜ್ಯ ಸ್ಥಳೀಯ ವೃಂದ ಮತ್ತು ಪ್ರಾಂತೀಯ ಸ್ಥಳೀಯ ವೃಂದಕ್ಕೆ (ಶೇಕಡಾ. 8% ಮತ್ತು **80**ರಷ್ಟು) ಒಳಪಡುವ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಬೆರಳಚ್ಚುಗಾರರ ತಾತ್ಕಾಲಿಕ ಜೇಷ್ಠತಾ ಪಟ್ಟಿ

| ಕ್ರ. ಸಂ | ಸಾಮಾನ್ಯ ಜೇಷ್ಠತಾ ಸಂಖ್ಯೆ | ಹೆಸರು ಶ್ರೀಮತಿ/ಶ್ರೀ | ನೇರ ನೇಮಕಾತಿ/ ಮುಂಬಡ್ತಿ/ ಇತರೆ | ಜನ್ಮ ದಿನಾಂಕ | ಸೇವೆಗೆ ಸೇರಿದ ದಿನಾಂಕ | ನೈಜವಾಗಿ ಮುಂಬಡ್ತಿ ಹೊಂದಿದ ದಿನಾಂಕ | ನೇಮಕಾತಿಗೆ/ ಜೇಷ್ಠತೆಗೆ ನೈಜವಾದ ಅರ್ಹತಾ ದಿನಾಂಕ | ಷರಾ |
|---|---|---|---|---|---|---|---|---|
| <1> | <2> | <3> | <4> | <5> | <6> | <7> | <8> | <9> |
| 1 | 124 | ಪ್ರೇಮಲ | ನೇ.ನೇ. | 29.11.1965 | 29.12.2000 | – | 20.12.2014 | ಬಡ್ತಿ |
| 2 | 132 | ನಾಗರಾಜ ಎಲ್ ಮೈಲವಾರ್‌ಕರ್ | ನೇ.ನೇ. | 10.02.1967 | 01.03.2004 | – | 20.02.2004 | 80% |
| 3 | 141 | ರೇಖಾ | ನೇ.ನೇ | 01.08.1977 | 18.01.2008 | – | 04.01.2008 | 80% |
| 4 | 144 | ಯಂಕಣ್ಣ ಗೌಡ | ನೇ.ನೇ | 01.06.1987 | 28.03.2013 | – | 20.03.2013 | 80% |

(ಸಹಿ)
ನಿರ್ದೇಶಕರು